**All India Radio: Bangalore**
**National Bulletin In Kannada**
**20.11.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**20.11.2025  1.10 p.m.**

**<><><><>**

**ಮುಖ್ಯಾಂಶಗಳು**

**೧. ಬಿಹಾರ ಮುಖ್ಯಮಂತ್ರಿಯಾಗಿ ೧೦ನೇ ಬಾರಿ ಪ್ರಮಾಣವಚನ ಸ್ವೀಕರಿಸಿದ ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್**

**೨. ಅಂಗೀಕೃತ ಮಸೂದೆಗಳನ್ನು ಅನಿರ್ಧಿಷ್ಟಾವಧಿಗೆ ತಡೆ ಹಿಡಯಲು ರಾಜ್ಯಪಾಲರಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ - ಸುಪ್ರೀಂಕೋರ್ಟ್**

**೩. ನವದೆಹಲಿಯಲ್ಲಿ ಕೊಲಂಬೊ ಭದ್ರತಾ ಸಮಾವೇಶದ ರಾಷ್ಟ್ರೀಯ ಭದ್ರತಾ ಸಲಹೆಗಾರರ ೭ನೇ ಸಭೆ ಆರಂಭ**

**೪. ೨೦೨೪-೨೫ರಲ್ಲಿ ದಾಖಲೆಯ ಮಟ್ಟಕ್ಕೇರಿದ ರಕ್ಷಣಾ ಉತ್ಪಾದನಾ ಮೌಲ್ಯ**

**೫. ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ; ಸಿಂಗಲ್ಸ್ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತದ ಯುವ ಶೆಟ್ಲರ್ ಲಕ್ಷ್ಯ ಸೇನ್**

**<><><><>**

ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಇಂದು ಬಿಹಾರದ ಮುಖ್ಯಮಂತ್ರಿಯಾಗಿ ೧೦ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು, ಪ್ರಮಾಣವಚನ ಬೋಧಿಸಿದರು. ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ನಿತೀಶ್ ಕುಮಾರ್ ಅವರ ಸಚಿವ ಸಂಪುಟಕ್ಕೆ ಬಿಜೆಪಿಯ ನಾಯಕರಾದ  ಸಾಮ್ರಾಟ್ ಚೌಧರಿ, ವಿಜಯ್ ಕುಮಾರ್ ಸಿನ್ಹಾ, ಮಂಗಲ್‌ಪಾಂಡೆ, ನಿತಿನ್ ನಬಿನ್ ಮತ್ತು ರಾಮ್‌ಕೃಪಾಲ್ ಯಾದವ್ ಸೇರಿದಂತೆ ಒಟ್ಟು ೨ ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಉತ್ತರಪ್ರದೇಶ ಮುಖಮಂತ್ರಿ ಯೋಗಿ ಆದಿತ್ಯನಾಥ್, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಕೇಂದ್ರ ಸಚಿವ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇತ್ತೀಚೆಗೆ ಮುಕ್ತಾಯಗೊಂಡ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಭರ್ಜರಿ ಜಯ ಸಾಧಿಸಿದ್ದು, ೨೪೩ ಸದಸ್ಯರ ವಿಧಾನಸಭೆಯಲ್ಲಿ ೨೦೨ ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೆ ಅಧಿಕಾರಕ್ಕೆ ಬಂದಿದೆ.

<><><>

ರಾಜ್ಯ ಶಾಸಕಾಂಗಗಳು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಅನಿರ್ಧಿಷ್ಟವಾಗಿ ಒಪ್ಪಿಗೆಯನ್ನು ತಡೆ ಹಿಡಿಯಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ತಿಳಿಸಿದೆ. ಸಂವಿಧಾನ ಕೇವಲ ಮೂರು ಸ್ಪಷ್ಟ ಆಯ್ಕೆಗಳನ್ನು ಒದಗಿಸುತ್ತದೆ. ರಾಜ್ಯಪಾಲರು ಒಂದೋ, ಒಪ್ಪಿಗೆ ನೀಡುವುದು ಇಲ್ಲವೇ ಮಸೂದೆಯನ್ನು ಪುನಃ ಶಾಸಕಾಂಗಕ್ಕೆ ಹಿಂದಿರುಗಿಸುವುದು ಅಥವಾ ರಾಷ್ಟ್ರಪತಿಗಳಿಗೆ ಉಲ್ಲೇಖಿಸುವ ಆಯ್ಕೆಗಳನ್ನು ಹೊಂದಿರುತ್ತಾರೆ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಸಂವಿಧಾನ ಪೀಠ ೧೪೩ನೇ ವಿಧಿಯಡಿ ರಾಷ್ಟ್ರಪತಿಯವರು ಮಾಡಿದ ಉಲ್ಲೇಖಕ್ಕೆ ಉತ್ತರಿಸಿದ್ದು, ರಾಜ್ಯಪಾಲರು ೨೦೦ನೇ ವಿಧಿಯಡಿ ಸೀಮಿತ ವಿವೇಚನೆಯನ್ನು ಹೊಂದಿರುತ್ತಾರೆ. ಆದರೆ ಅದು ಸಂವಿಧಾನದಲ್ಲಿ ಉಲ್ಲೇಖಿಸಲಾದ ಆಯ್ಕೆಗಳಿಗೆ ಸೀಮಿತವಾಗಿದೆ ಎಂದು ತಿಳಿಸಿದೆ. ಈ ಮೂರು ಆಯ್ಕೆಗಳಲ್ಲಿ ಒಂದನ್ನು ಆಯ್ದುಕೊಳ್ಳಲು ರಾಜ್ಯಪಾಲರಿಗೆ ಸ್ವತಂತ್ರ್ಯವಿದೆ. ಆದರೆ ಮಸೂದೆಗಳನ್ನು ಶಾಶ್ವತವಾಗಿ ಹಿಡಿದಿಟ್ಟುಕೊಳ್ಳುವ ಅವಕಾಶವನ್ನು ಸಂವಿಧಾನ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

<><><>

ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಇಂದು ನವದೆಹಲಿಯಲ್ಲಿ ಆರಂಭವಾಗಿರುವ ಕೊಲಂಬೊ ಭದ್ರತಾ ಸಮಾವೇಶದ ರಾಷ್ಟ್ರೀಯ ಭದ್ರತಾ ಸಲಹೆಗಾರರ ೭ನೇ ಸಭೆಯಲ್ಲಿ ಮಾಲ್ದೀವ್ಸ್, ಮಾರಿಷಸ್, ಶ್ರೀಲಂಕಾ ಮತ್ತು ಬಾಂಗ್ಲಾದೇಶ ಸೇರಿದಂತೆ ಸದಸ್ಯ ರಾಷ್ಟ್ರಗಳ ಭದ್ರತಾ ಸಲಹೆಗಾರರ ಅತಿಥ್ಯ ವಹಿಸಿದ್ದಾರೆ. ಸೀಶೆಲ್ಸ್ ವೀಕ್ಷಕ ರಾಷ್ಟ್ರವಾಗಿ ಪಾಲ್ಗೊಂಡಿದ್ದು, ಮಲೇಷಿಯಾವನ್ನು ಅತಿಥಿ ರಾಷ್ಟ್ರವಾಗಿ ಆಹ್ವಾನ ನೀಡಲಾಗಿದೆ. ಹಿಂದೂ ಮಹಾಸಾಗರ ಪ್ರದೇಶದಲ್ಲಿ ಪ್ರಾದೇಶಿಕ ಭದ್ರತೆಯನ್ನು ಬಲಪಡಿಸಲು ಮತ್ತು ಸದಸ್ಯ ರಾಷ್ಟ್ರಗಳ ನಡುವೆ ನಿಕಟ ಸಹಕಾರವನ್ನು ಉತ್ತೇಜಿಸಲು ಪಾಲುದಾರಿಕೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಸಮಾವೇಶವನ್ನು ರಚಿಸಲಾಗಿದೆ. ಸಭೆಯಲ್ಲಿ ಭಯೋತ್ಪಾದನೆಯನ್ನು ಎದುರಿಸುವುದು, ಅಂತಾರಾಷ್ಟ್ರೀಯ ಸಂಘಟಿತ ಅಪರಾಧಗಳ ವಿರುದ್ಧ ಹೋರಾಡುವುದು, ಸೈಬರ್ ಭದ್ರತೆ, ನಿರ್ಣಾಯಕ ಮೂಲಸೌಕರ್ಯ ರಕ್ಷಣೆ ಮತ್ತು ಕಡಲ ಸುರಕ್ಷತೆ ಮತ್ತು ಭದ್ರತೆ ಕುರಿತು ಚರ್ಚೆ ನಡೆಯಲಿದೆ.

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಛತ್ತೀಸ್‌ಗಢ, ತೆಲಂಗಾಣ ಮತ್ತು ಆಂಧ್ರಪ್ರದೇಶಕ್ಕೆ ಮೂರು ದಿನಗಳ ಭೇಟಿ ನೀಡಲಿದ್ದಾರೆ. ಛತ್ತೀಸ್‌ಗಢದ ಭೇಟಿಯ ಸಮಯದಲ್ಲಿ ಅವರು, ಅಂಬಿಕಾಪುರದಲ್ಲಿ ಜನಜಾತೀಯ ಗೌರವ ದಿವಸ್ ಆಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಾಳೆ ರಾಷ್ಟ್ರಪತಿ ಅವರು, ತೆಲಂಗಾಣದ ಸಿಕಂದರಾಬಾದ್‌ನಲ್ಲಿರುವ ರಾಷ್ಟ್ರಪತಿ ನಿಲಯದಲ್ಲಿ ಭಾರತೀಯ ಕಲಾ ಮಹೋತ್ಸವ ೨೦೨೫ಕ್ಕೆ ಚಾಲನೆ ನೀಡಲಿದ್ದಾರೆ.

<><><>

೨೦ನೇ ಜಿ-೨೦ ನಾಯಕರ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ನಾಳೆಯಿಂದ ಇದೇ ೨೩ ರವರೆಗೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ಗೆ ಭೇಟಿ ನೀಡಲಿದ್ದಾರೆ. ಇದು ಜಾಗತಿಕ ದಕ್ಷಿಣದಲ್ಲಿ ನಡೆಯುತ್ತಿರುವ ಸತತ ನಾಲ್ಕನೇ ಜಿ-೨೦ ಶೃಂಗಸಭೆಯಾಗಿದೆ. ಶೃಂಗಸಭೆಯಲ್ಲಿ, ಜಿ-೨೦ ಕಾರ್ಯಸೂಚಿಯ ಕುರಿತು ಭಾರತದ ದೃಷ್ಟಿಕೋನಗಳನ್ನು ಪ್ರಧಾನಿ ಮಂಡಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಶೃಂಗಸಭೆಯ ಮೂರು ಅಧಿವೇಶನಗಳಲ್ಲಿಯೂ ಪ್ರಧಾನಿ ಮಾತನಾಡುವ ನಿರೀಕ್ಷೆಯಿದೆ. ಜಿ-೨೦ ನಾಯಕರ ಶೃಂಗಸಭೆಯ ಸಂದರ್ಭದಲ್ಲಿ ಉಪಸ್ಥಿತರಿರುವ ಕೆಲವು ನಾಯಕರೊಂದಿಗೆ ಪ್ರಧಾನಿ ಅವರು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ. ಇದರ ಜೊತೆಗೆ ದಕ್ಷಿಣ ಆಫ್ರಿಕಾ ಆಯೋಜಿಸುತ್ತಿರುವ ಭಾರತ-ಬ್ರೆಜಿಲ್-ದಕ್ಷಿಣ ಆಫ್ರಿಕಾ ನಾಯಕರ ಸಭೆಯಲ್ಲಿಯೂ ಅವರು ಭಾಗವಹಿಸಲಿದ್ದಾರೆ.

<><><><>

೨೦೨೪-೨೫ರಲ್ಲಿ ಭಾರತ ಈವರೆಗಿನ ಅತ್ಯಧಿಕ ಒಂದು ಲಕ್ಷದ ೫೪ ಸಾವಿರ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಉತ್ಪಾದನೆಯನ್ನು ದಾಖಲಿಸಿದೆ. ರಕ್ಷಣಾ ರಫ್ತು ಕೂಡ ದಾಖಲೆಯ ೨೩ ಸಾವಿರದ ೬೨೨ ಕೋಟಿ ರೂಪಾಯಿ ತಲುಪಿದೆ. ಇದು ೨೦೧೪ರಲ್ಲಿ ಒಂದು ಸಾವಿರ ಕೋಟಿಗೂ ಕಡಿಮೆಯಿತ್ತು. ರಕ್ಷಣಾ ಉತ್ಪಾದನೆಯಲ್ಲಿನ ಈ ಏರಿಕೆಗೆ ಕಳೆದ ದಶಕದಲ್ಲಿ ದೇಶದ ಮಿಲಿಟರಿ ಕೈಗಾರಿಕಾ ನೆಲೆಗೆ ವಿಸ್ತರಿಸಲಾದ ಹಣಕಾಸು ಹಂಚಿಕೆ ಮತ್ತು ಸೂಕ್ತ ನೀತಿಗಳ ಮೂಲಕ ಸರ್ಕಾರ ನೀಡಿರುವ ಬೆಂಬಲ ಪ್ರಮುಖ ಕಾರಣವಾಗಿದೆ. ೨೦೧೩-೧೪ರಲ್ಲಿ ೨ ಲಕ್ಷ ೫೩ ಸಾವಿರ ಕೋಟಿ ರೂಪಾಯಿಗಳಿಂದ ೨೦೨೫-೨೬ರಲ್ಲಿ ೬ ಲಕ್ಷ ೮೧ ಸಾವಿರ ಕೋಟಿ ರೂಪಾಯಿಗಳಿಗೆ ರಕ್ಷಣಾ ಬಜೆಟ್ ಹೆಚ್ಚಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಇದು ರಾಷ್ಟ್ರದ ಮಿಲಿಟರಿ ಮೂಲ ಸೌಕರ್ಯಗಳನ್ನು ಬಲಪಡಿಸುವ ಸರ್ಕಾರದ ಬದ್ಧತೆಗೆ ಅನುಗುಣವಾಗಿದೆ. ೨೦೨೯ರ ವೇಳೆಗೆ ಮೂರು ಲಕ್ಷ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ಉತ್ಪಾದನೆಯನ್ನು ಮತ್ತು ೫೦ ಸಾವಿರ ಕೋಟಿ ರೂಪಾಯಿ ಮೌಲ್ಯದ ರಕ್ಷಣಾ ರಫ್ತನ್ನು ಸಾಧಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಇದು ಆರ್ಥಿಕ ಬೆಳವಣಿಗೆಗೆ ಪುಷ್ಟಿ ನೀಡುವ ಜೊತೆಗೆ ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗಿ ಭಾರತದ ಪಾತ್ರವನ್ನು ಬಲಪಡಿಸುತ್ತದೆ.

<><><><>

ಇದೇ ೨೮ರವರೆಗೆ ಗೋವಾದಲ್ಲಿ ನಡೆಯಲಿರುವ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ - ಐಎಫ್ಎಫ್ಐ ೨೦೨೫ಕ್ಕೆ ಇಂದು ವಿಧ್ಯುಕ್ತ ಚಾಲನೆ ದೊರೆಯಲಿದೆ. ಸಾಂಪ್ರದಾಯಿಕ ಒಳಾಂಗಣ ಉದ್ಘಾಟನಾ ಸಮಾರಂಭದ ಬದಲಿಗೆ ಈ ಬಾರಿ ಮೊದಲ ಬಾರಿಗೆ ಭವ್ಯ ಮೆರವಣಿಗೆಯೊಂದಿಗೆ ಉತ್ಸವ ಆರಂಭಗೊಳ್ಳಲಿದೆ.

**ಈ ಕುರಿತು ಒಂದು ವರದಿ : ಅಶೋಕ ಬಿ.ಎ.**

ಚಲನ ಚಿತ್ರೋತ್ಸವದಲ್ಲಿ ಸುಮಾರು ೮೦ ದೇಶಗಳ ೨೭೦ಕ್ಕೂ ಹೆಚ್ಚು ಚಲನಚಿತ್ರಗಳು ಪ್ರದರ್ಶನಗೊಳ್ಳಲಿದ್ದು, ಇದು ವಿಭಿನ್ನ ದೇಶಗಳ ನಡುವೆ ಸಾಂಸ್ಕೃತಿಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಜೊತೆಗೆ ಭಾರತೀಯ ಚಲನಚಿತ್ರಗಳಿಗೆ ಜಾಗತಿಕ ವೇದಿಕೆ ಒದಗಿಸುತ್ತದೆ. ಕೃತಕ ಬುದ್ಧಿಮತ್ತೆ ಆಧರಿತ ವಿಷಯಕ್ಕಾಗಿ ಮೀಸಲಾದ ವಿಭಾಗದೊಂದಿಗೆ ಐಎಫ್ಎಫ್ಐ ಹೊಸ ತಂತ್ರಜ್ಞಾನಗಳನ್ನು ಸಹ ಸಂಯೋಜಿಸುತ್ತದೆ. ಜಾಗತಿಕ ಚಲನಚಿತ್ರ ನಿರ್ಮಾಪಕರಿಗೆ ತಮ್ಮ ಚಲನಚಿತ್ರಗಳನ್ನು ಭಾರತ ಮಾತ್ರವಲ್ಲದೆ, ಪ್ರಪಂಚದಾದ್ಯಂತದ ಸಿನಿಪ್ರಿಯರಿಗೆ ಪ್ರದರ್ಶಿಸಲು ಅವಕಾಶಗಳನ್ನು ಕಲ್ಪಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ 'ನಾರಿ ಶಕ್ತಿ' ಆಶಯಕ್ಕೆ ಅನುಗುಣವಾಗಿ, ಈ ವರ್ಷ ಮಹಿಳೆಯರು ನಿರ್ದೇಶಿಸಿದ ೫೦ಕ್ಕೂ ಹೆಚ್ಚು ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಸ್ವಾತಂತ್ರ್ಯದ ೭೫ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಕಳೆದ ವರ್ಷ ೭೫ ಯುವ ಮನಸ್ಸುಗಳಿಗೆ ಈ ಉತ್ಸವದಲ್ಲಿ ವೇದಿಕೆ ಕಲ್ಪಿಸಲಾಗಿತ್ತು. ಈಗ ಈ ಸಂಖ್ಯೆಯನ್ನು ೧೨೦ಕ್ಕೆ ಏರಿಸಲಾಗಿದೆ. ನಿನ್ನೆ ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಚಿತ್ರೋತ್ಸವ ನಡೆಯುವ ಸ್ಥಳದ ಪರಿವೀಕ್ಷಣೆ ನಡೆಸಿದರು.

<><><><>

ಸಿಡ್ನಿಯಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಸೂಪರ್ -೫೦೦ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ, ಭಾರತೀಯ ಶಟ್ಲರ್ ಲಕ್ಷ್ಯ ಸೇನ್ ಇಂದು ನಡೆದ ೧೬ರ ಸುತ್ತಿನ ಪಂದ್ಯದಲ್ಲಿ ತೈವಾನ್‌ನ ಚಿ ಯು ವಿರುದ್ಧ ೨೧-೧೭, ೧೩-೨೧, ೨೧-೧೩ ಸೆಟ್‌ಗಳ ಅಂತರದಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಇವರ ಜೊತೆಗೆ ಭಾರತದ ಮತ್ತೋರ್ವ ಆಟಗಾರ ಆಯುಷ್ ಶೆಟ್ಟಿ ಕೂಡ ೧೬ರ ಸುತ್ತಿನ ಪಂದ್ಯದಲ್ಲಿ ಜಪಾನ್‌ನ ಕೊದೈ ನರೌಕಾ ವಿರುದ್ಧ ೨೧-೧೭, ೨೧-೧೯, ಅಂಕಗಳ ಅಂತರದಲ್ಲಿ ಗೆಲುವು ಸಾಧಿಸಿರು. ಭಾರತದ ಹೆಚ್.ಎಸ್. ಪ್ರಣಯ್ ಇದೇ ಸುತ್ತಿನ ತಮ್ಮ ಪಂದ್ಯದಲ್ಲಿ ಇಂಡೋನೇಷಿಯಾದ ಪ್ರತಿಸ್ಪರ್ಧಿ ವಿರುದ್ಧ ಸೋಲನುಭವಿಸಿದ್ದಾರೆ. ಇಂದು ಮಧ್ಯಾಹ್ನ ಭಾರತದ ಕಿಡಂಬಿ ಶ್ರೀಕಾಂತ್ ಮತ್ತು ತರುಣ್ ಮನ್ನೆಪಲ್ಲಿ ಪ್ರತ್ಯೇಕ ಪಂದ್ಯಗಳಲ್ಲಿ ಕಣಕಿಳಿಯಲಿದ್ದಾರೆ.

**<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>**

**<><> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ <><>**